ಕ್ರಿ. ಮಿಸ. ನಂ. 12/2021

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 11-12-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಕೆ. ಆರ್. ಎನ್. ವಕೀಲರಿಂದಃ**

ನನ್ನ ಮದುವೆಯಾದ ಮೇಲೆ ನಾನು ನನ್ನ ಗಂಡನ ಮನೆಯಲ್ಲಿ ಒಂದು ವಾರಗಳ ಕಾಲ ಸಂಸಾರ ಮಾಡಿರುತ್ತೇನೆ. ಮದುವೆಯ ಪೂರ್ವದಲ್ಲಿ ಮದುವೆಯ ಖರ್ಚನ್ನು ಅರ್ಧ ಕೊಡಬೇಕು ಎಂದು ನಮ್ಮ ಮತ್ತು ಎದುರುದಾರರ ಮನೆಯವರ ಮಧ್ಯೆ ಮಾತುಕತೆಯಾಗಿತ್ತು. ಮದುವೆಯ ಸಂದರ್ಭದಲ್ಲಿ ನನಗೆ ಒಂದು ನೆಕ್ಲೆಸ್ ಮತ್ತು ಎರಡು ಬಳೆಯನ್ನು ನಮ್ಮ ಮನೆಯವರು ಹಾಕಿದ್ದು ಅದು ಎಷ್ಟು ತೂಕದ್ದು ಎಂದು ನನಗೆ ನೆನಪಿಲ್ಲ. ಸದ್ರಿ ಆಭರಣಗಳು ಈಗ ನನ್ನ ಬಳಿಯೇ ಇವೆ. ನನ್ನ ಗಂಡನ ಮನೆಯವರು ನನಗೆ ಮಂಗಳಸೂತ್ರ ಮಾತ್ರ ಕೊಟ್ಟಿರುತ್ತಾರೆ. ಮದುವೆಯ ಒಟ್ಟೂ ಖರ್ಚು ಐದುವರೆ ಲಕ್ಷ ರೂ ಆಗಿತ್ತು. ಅರ್ಧ ಖರ್ಚನ್ನು ನನ್ನ ತಂದೆ ಎದುರುದಾರರ ಕಡೆಯವರಿಗೆ ಕೊಟ್ಟಿರುತ್ತಾರೆ. ನಾನು ಮದುವೆ ಪೂರ್ವದಲ್ಲಿ ಇಸ್ರೇಲಿನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ನಂತರ ಬ್ಯೂಟಿಷಿಯನ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನ ಮನೆಯಲ್ಲಿ ನನ್ನ ಗಂಡನ ತಮ್ಮ ಇದ್ದು ಆತ ಕುವೈತ್ ನಲ್ಲಿ ಕೆಲಸ ಮಾಡುತ್ತಿದ್ದನು. ಆತನ ಮದುವೆ ಈಗ ಆಗಿದೆ, ಆಗ ಆಗಿರಲಿಲ್ಲ. ನನ್ನ ಮದುವೆ ಪೂರ್ವದಲ್ಲಿ ಎದುರುದಾರರ ಇಬ್ಬರು ಸಹೋದರಿಯರ ಮದುವೆ ಆಗಿತ್ತು. ಅವರು ನನ್ನ ಜೊತೆ ನನ್ನ ಗಂಡನ ಮನೆಯಲ್ಲಿಯೇ ವಾಸವಿದ್ದರು. ನನ್ನ ಗಂಡನ ಮನೆಯಲ್ಲಿ ನನ್ನ ಅತ್ತೆ, ನನ್ನ ಗಂಡ ಮತ್ತು ಆತನ ಇಬ್ಬರು ಮದುವೆಯಾಗದ ಸಹೋದರಿಯರು ಮತ್ತು ಇಬ್ಬರು ಮದುವೆಯಾದ ಸಹೋದರಿಯರು ವಾಸವಿದ್ದರು. ಆತನ ಇಬ್ಬರು ಸಹೋದರಿಯರು ಇದುವರೆಗೂ ಮದುವೆ ಆಗಿರುವುದಿಲ್ಲ. ಮದುವೆಯಾದ ಒಂದು ವಾರದ ನಂತರ ನಾನು ನನ್ನ ಗಂಡನ ಜೊತೆ ಬೆಂಗಳೂರಿಗೆ ಹೋಗಿರುತ್ತೇನೆ. ಅಲ್ಲಿ ನಾವು ಬಾಡಿಗೆ ಮನೆಯಲ್ಲಿ ಇದ್ದೆವು. ಅಲ್ಲಿ ನಾವು ಒಂದು ವರ್ಷಗಳ ಕಾಲ ವಾಸವಿದ್ದೆವು. ನಾನು ಬೆಂಗಳೂರಿನಲ್ಲಿ ಏನೂ ಕೆಲಸ ಮಾಡುತ್ತಿರಲಿಲ್ಲ. ನಾನು ಐದು ತಿಂಗಳ ಗರ್ಭಿಣಿಯಾಗಿದ್ದಾಗ ಎದುರುದಾರರು ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ. ಆಗ ನಾನು ವಾಪಾಸು ನನ್ನ ತಂದೆಯ ಮನೆಗೆ ಹೋಗಿರುತ್ತೇನೆ. ಎದುರುದಾರರು ಮೊದಲು ನನ್ನನ್ನು ಆಸ್ಪತ್ರೆ ಕರೆದುಕೊಂಡು ಹೋಗಿದ್ದರು, ನಂತರ ಕರೆದುಕೊಂಡು ಹೋಗಿರುವುದಿಲ್ಲ. ಎದುರುದಾರರು ಐಟಿ ಕಂಪನಿಯಲ್ಲಿ ಟೀಮ್ ಲೀಡರ್ ಆಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಕೆಲವೊಂದು ಬಾರಿ ರಾತ್ರಿ ಪಾಳಿ ಕೂಡಾ ಬರುತ್ತಿತ್ತು. ನಾನು ಬೆಂಗಳೂರಿನಲ್ಲಿದ್ದಾಗ ನನ್ನ ಸಂಬಂಧಿಕರು ಯಾವತ್ತೂ ಅಲ್ಲಿಗೆ ಬಂದಿದ್ದು ಇರುವುದಿಲ್ಲ. ನನಗೆ ಎದುರುದಾರರು ಹೊಡೆದಾಗ ಅವರ ವಿರುದ್ಧ ಪೋಲಿಸರಿಗೆ ದೂರು ಕೊಡಲು ನನಗೆ ಯಾವದೇ ತೊಂದರೆ ಇರಲಿಲ್ಲ. ಬೆಂಗಳೂರಿನಲ್ಲಿ ನನ್ನ ಯಾವದೇ ಸಂಬಂಧಿಕರು ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.